ಇದಕ್ಕಾಗಿ ಒಂದು ದಿನಾಂಕ ನಿಶ್ಚಯ ಮಾಡಿ ನಾವು ದೆಹಲಿಗೆ ಹೋಗಿ ಬರೋಣ. ಅದಕ್ಕೆ ಮುಂಚೆ ಸುಪ್ರೀಂಕೋರ್ಟ್‌ಗೆ ಕೇಂದ್ರ ಸರ್ಕಾರ ಸಲ್ಲಿಸಿರುವಂಥ ಪೂರ್ಣ ಮನವಿ ಪತ್ರದ ಪ್ರತಿ ನನಗೆ ದೊರೆತ ಮೇಲೆ ಉಳಿದಂಥ ಪ್ರತಿಕ್ರಿಯೆ ವ್ಯಕ್ತಪಡಿಸುತ್ತೇನೆ. ಒಟ್ಟಿನಲ್ಲಿ ಕೇಂದ್ರ ಸರ್ಕಾರ ರಾಜ್ಯದ ಪರವಾಗಿ ಒಂದು ಅಫಿಡೆವಿಟನ್ನು ಫೈಲ್ ಮಾಡಿರುವುದರಿಂದ ನಮಗೆಲ್ಲರಿಗೂ ಸಂತೋಷವಾಗಿದೆ. ಆದಕಾರಣ ಪ್ರಧಾನಿಯವರಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಪ್ರಶ್ನೋತ್ತರ

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ನೇಮಕಾತಿ ಬಗ್ಗೆ

106 (195) ಶ್ರೀ ವಸಂತ ಬಂಗೇರ ಕೆ. (ಬೆಳ್ತಂಗಡಿ):– ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ನೇರ ನೇಮಕಾತಿ ಮೂಲಕ ತುಂಬಲಾದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹುದ್ದೆಗೆ ಸರ್ಕಾರವು ಒಟ್ಟು ಎಷ್ಟು ಅರ್ಜಿಗಳನ್ನು ಸ್ವೀಕರಿಸಲಾಗಿತ್ತು;

ಆ) ಪರೀಕ್ಷೆ ನಡೆಸುವ ಜವಾಬ್ದಾರಿಯನ್ನು ಯಾವ ಆಧಾರದಲ್ಲಿ ಯಾವ ಸಂಸ್ಥೆಗೆ ವಹಿಸಿಕೊಡಲಾಗಿತ್ತು;

ಇ) ಪ್ರತಿ ಅರ್ಜಿದಾರರಿಂದ ಎಷ್ಟು ಶುಲ್ಕವನ್ನು ಪರೀಕ್ಷೆ ಹಾಗೂ ಇತರ ಶುಲ್ಕವೆಂದು ವಸೂಲಿ ಮಾಡಲಾಗಿದೆ;

ಈ) ಪರೀಕ್ಷೆಯಲ್ಲಿ ತೇರ್ಗಡೆಯಾದ ಎಷ್ಟು ಮಂದಿಗೆ ನೇಮಕಾತಿ ಆದೇಶ ನೀಡಲಾಗಿದೆ (ಜಿಲ್ಲಾವಾರು ವಿವರ ನೀಡುವುದು);

ಉ) ಪರೀಕ್ಷೆ ನಡೆಸಿದ ಸಂಸ್ಥೆಗೆ ಸರ್ಕಾರದಿಂದ ಎಷ್ಟು ಅನುದಾನವನ್ನು ಸೇವಾ ಶುಲ್ಕವನ್ನು ನೀಡಲಾಗಿದೆ?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಸಚಿವರು):–

ಅ) 1,67,838 ಲಕ್ಷ ಅರ್ಜಿಗಳನ್ನು ಸ್ವೀಕರಿಸಲಾಗಿತ್ತು

ಆ) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಅಡಿಯಲ್ಲಿ ಆರ್ಥಿಕ ಇಲಾಖೆಯಿಂದ ವಿನಾಯಿತಿ ಪಡೆದು, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸಂಸ್ಥೆಗೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಸಂಸ್ಥೆಯ ನೆರವಿನೊಂದಿಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿ ಅಭ್ಯರ್ಥಿಗಳ ಮಾಸ್ಟರ್ ಮೆರಿಟ್ ಲಿಸ್ಟ್ ಸಿದ್ಧಪಡಿಸಿ ಆಯ್ಕೆ ಪ್ರಾಧಿಕಾರಕ್ಕೆ ನೀಡುವ ಕಾರ್ಯವನ್ನು ವಹಿಸಿಕೊಡಲಾಗಿತ್ತು.

ಇ) ಸಾಮಾನ್ಯ ವರ್ಗದ ಅಭ್ಯರ್ಥಿಗಳಿಂದ ತಲಾ ರೂ. 500.00 ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1 ಅಭ್ಯರ್ಥಿಗಳಿಂದ ತಲಾ ರೂ. 300.00 ರಂತೆ ಅರ್ಜಿ ಶುಲ್ಕ ಪಡೆಯಲಾಗಿದೆ.

ಈ) ಗುಲ್ಬರ್ಗಾ ಜಿಲ್ಲೆಯನ್ನು ಹೊರತುಪಡಿಸಿ ಇತರೆ ಜಿಲ್ಲೆಗಳಲ್ಲಿ ಒಟ್ಟು 2349 ಮಂದಿಗೆ ನೇಮಕಾತಿ ಆದೇಶ ನೀಡಲಾಗಿದೆ. (ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ)

ಉ) ಇದುವರೆವಿಗೆ ರೂ. 2,75,08,000.00 (ಎರಡು ಕೋಟಿ ಎಪ್ಪತ್ತೈದು ಲಕ್ಷ ಎಂಟು ಸಾವಿರ ರೂಪಾಯಿಗಳು) ಗಳ ಸೇವಾ ಶುಲ್ಕವನ್ನು ನೀಡಲಾಗಿದೆ.

ಅನುಬಂಧ

ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹುದ್ದೆಗಳ ನೇರ ನೇಮಕಾತಿ ಕೋಟಾದ ಹುದ್ದೆಗಳ ವಿವರ

ಕ.ಸಂ.	ಜಿಲ್ಲಾ ಪಂಚಾಯಿತಿ		ಹುದ್ದೆಗಳ ಸಂಖ್ಯೆ
1	ಬೆಂಗಳೂರು ನಗರ	...	37
2	ಬೆಂಗಳೂರು ಗ್ರಾಮಾಂತರ	...	42
3	ಬಾಗಲಕೋಟೆ	...	70
4	ಬೆಳಗಾಂ	...	217
5	ಬಳ್ಳಾರಿ	...	84
6	ಬೀದರ್	...	78
7	ಬಿಜಾಪುರ	...	89
8	ಚಿಕ್ಕಮಗಳೂರು	...	100
9	ಚಿತ್ರದುರ್ಗ	...	82
10	ಚಾಮರಾಜನಗರ	...	52
11	ದಕ್ಷಿಣ ಕನ್ನಡ	...	91

12	ದಾವಣಗೆರೆ	...	103
13	ಧಾರವಾಡ	...	55
14	ಗದಗ	...	47
15	ಹಾಸನ	...	115
16	ಹಾವೇರಿ	...	93
17	ಕೊಡಗು	...	43
18	ಕೋಲಾರ	...	70
19	ಕೊಪ್ಪಳ	...	58
20	ಮಂಡ್ಯ	...	104
21	ಮೈಸೂರು	...	104
22	ರಾಯಚೂರು	...	74
23	ಶಿವಮೊಗ್ಗ	...	116
24	ತುಮಕೂರು	...	144
25	ಉತ್ತರ ಕನ್ನಡ	...	92
26	ಉಡುಪಿ	...	66
27	ರಾಮನಗರ	...	56
28	ಚಿಕ್ಕಬಳ್ಳಾಪುರ	...	67
		ಒಟ್ಟು	2349

ಶ್ರೀ ವಸಂತ ಬಂಗೇರೆ: ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ 1,67,838 ಅರ್ಜಿ ಸ್ವೀಕಾರವಾಗಿದೆ ಮತ್ತು 2349 ಮಂದಿಗೆ ನೇಮಕಾತಿ ಆದೇಶ ನೀಡಲಾಗಿದೆಯೆಂದು ಹೇಳಿದ್ದಾರೆ. ನೇಮಕಾತಿ ಆದೇಶ ನೀಡುವಾಗ ಗುಲ್ಬರ್ಗಾ ಜಿಲ್ಲೆಯನ್ನು ಹೊರತುಪಡಿಸಿ ಪರೀಕ್ಷೆ ನಡೆಸುವ ಸಂಸ್ಥೆಗೆ 2,75,08,000/– ರೂಪಾಯಿಗಳ ಶುಲ್ಕವನ್ನು ನೀಡಲಾಗಿದೆ. ಇದು ಅತಿಯಾಯಿತು ಎಂದು ತಾವು ಭಾವಿಸುತ್ತೀರಾ ಸದರಿ ಸಂಸ್ಥೆಗೆ ಇನ್ನೂ ಕೂಡ ಸೇವಾ ಶುಲ್ಕ ಎಷ್ಟು ನೀಡಬೇಕಾದ್ದು ಬಾಕಿ ಇದೆ?

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಬಿ.ಡಿ.ಒ.ಗಳ ನೇಮಕಾತಿ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಅದರ ಬಗ್ಗೆ ಈಗಾಗಲೇ ಡಿಟೈಲಾಗಿ ನಾವು ಹೇಳಿದ್ದೇವೆ. 2500 ಮಂದಿಯನ್ನು ಅಪಾಯಿಂಟ್‌ಮೆಂಟ್ ಮಾಡಬೇಕು ಎಂದಾಗಿತ್ತು. ಅದರಲ್ಲಿ ಈಗಾಗಲೇ 2349 ಮಂದಿ ನೇಮಕಾತಿಯಾಗಿ ಅವರಿಗೆ ಪೋಸ್ಟಿಂಗ್ ಕೊಟ್ಟಿದ್ದೇವೆ. ಮೂರು ಕಡೆ ಅವರನ್ನು compose ಮಾಡಿ ಅವರಿಗೆ ಎಲ್ಲಾ ರೀತಿಯಾದಂಥ ತಿಳುವಳಿಕೆಯನ್ನು ಕೊಡುವಂಥ ಕೆಲಸವನ್ನೂ ಕೂಡ ನಾವು ಸಂಸ್ಥೆಯಾದ Indian Institute of Management ಸಂಸ್ಥೆಗೆ 2 ಕೋಟಿ 75 ಲಕ್ಷದ 8 ಸಾವಿರ ರೂ.ಗಳನ್ನು ಸೇವಾ ಶುಲ್ಕವಾಗಿ

ನಾವು ಈಗಾಗಲೇ ಕೊಟ್ಟಿದ್ದೇವೆ. ಇನ್ನು ಎಷ್ಟು ಬಾಕಿ ಕೊಡಬೇಕು ಎನ್ನುವ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಇನ್ನೂ ಆ ಪ್ರೊಸಸ್ ನಡೆಯುತ್ತಿದೆ. ಈಗಾಗಲೇ ನಾವು ಇಷ್ಟು ಹಣವನ್ನು ಕೊಟ್ಟಿದ್ದೇವೆ. ಅಂದರೆ ಕೆಲವೊಂದರಲ್ಲಿ ವೆರಿಫಿಕೇಶನ್ ಇದೆ. ಈಗ ಗುಲ್ಬರ್ಗಾ ಜಿಲ್ಲೆಗೆ ಸಂಬಂಧಪಟ್ಟದ್ದು ಕೋರ್ಟ್‌ಗೆ ಹೋಗಿದೆ. ಅಲ್ಲಿ ಸ್ಟೇ ಆಗಿದೆ. ಅವರ ನೇಮಕಾತಿ ಕೂಡ ಆಗಬೇಕು. ಇವೆಲ್ಲಾ ಪ್ರೊಸಸ್‌ಗಳು ಇವೆ. ಹೀಗಾಗಿ ಈಗಾಗಲೇ 2 ಕೋಟಿ 75 ಲಕ್ಷ 8 ಸಾವಿರ ರೂ.ಗಳನ್ನು ನಾವು ಕಟ್ಟಿದ್ದೇವೆ. ಒಬ್ಬ ಅಭ್ಯರ್ಥಿಗೆ 200 ರೂ.ಗಳ ಶುಲ್ಕವೆಂದು ನಿಗದಿ ಮಾಡಿ ಅದರಂತೆ ನಾವು ಆ ಸಂಸ್ಥೆಗೆ ಹಣವನ್ನು ಕಟ್ಟಿರುವಂಥದ್ದು. ಹೀಗಾಗಿ ಅದರ ಅನ್ವಯ ಈಗಾಗಲೇ 2 ಕೋಟಿ 75 ಲಕ್ಷ 8 ಸಾವಿರ ರೂ.ಗಳನ್ನು ಕಟ್ಟಿದ್ದೇವೆ. ಮುಂದೆ ಇನ್ನೂ ಎಷ್ಟು ಕಟ್ಟಬೇಕಾಗುತ್ತದೆ' ಎನ್ನುವುದಕ್ಕೆ ಪ್ರೊಸಸ್ ಇನ್ನೂ ನಡೆದಿದೆ. ಅದು ಇನ್ನೂ ಕಂಪ್ಲೀಟ್ ಆಗಿಲ್ಲ. ಅದು ಕಂಪ್ಲೀಟ್ ಮಾಡಿದ ಮೇಲೆ ನಾವು ಹಣವನ್ನು ಕಟ್ಟುತ್ತೇವೆ.

ಬೆಳಗಾವಿ ಜಿಲ್ಲೆಯಲ್ಲಿರುವ ಪಶು ಆಸ್ಪತ್ರೆಗಳಲ್ಲಿ ಖಾಲಿ ಇರುವ ಹುದ್ದೆಗಳ ಬಗ್ಗೆ

109 (351) ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಚಿಕ್ಕೋಡಿ–ಸದಲಗ):– ಮಾನ್ಯ ಪಶುಸಂಗೋಪನಾ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬೆಳಗಾವಿ ಜಿಲ್ಲೆ, ಚಿಕ್ಕೋಡಿ–ಸದಲಗ ಮತಕ್ಷೇತ್ರದಲ್ಲಿ ಎಷ್ಟು ಪಶು ಚಿಕಿತ್ಸಾಲಯ/ ಪಶು ಆಸ್ಪತ್ರೆಗಳಿವೆ; ಇವುಗಳಿಗೆ ಮಂಜೂರಾದ ಹುದ್ದೆಗಳೆಷ್ಟು; ಮಂಜೂರಾಗಿರುವ ಅಷ್ಟೂ ಹುದ್ದೆಗಳನ್ನು ಭರ್ತಿ ಮಡಲಾಗಿದೆಯೇ; ಇಲ್ಲದಿದ್ದಲ್ಲಿ, ಕಾರಣಗಳೇನು; ಇವುಗಳನ್ನು ಶೀಘ್ರ ಭರ್ತಿ ಮಾಡಲು ಯಾವ ಕ್ರಮ ಕೈಗೊಳ್ಳಲಾಗುತ್ತಿದೆ;

ಆ) ಕ್ಷೇತ್ರದಲ್ಲಿನ ಪಶು ಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೇರಿಸಲಾಗುತ್ತಿದೆಯೇ; ಇಲ್ಲದಿದ್ದಲ್ಲಿ, ಕಾರಣಗಳೇನು; ಕ್ಷೇತ್ರದ ಜನವಾಡ, ಹಿರೇಕೂಡಿ ಹಾಗೂ ಜನವಾಡ ಗ್ರಾಮಗಳಲ್ಲಿ ಪಶು ಚಿಕಿತ್ಸಾಲಯ ಹಾಗೂ ಎಕ್ಸಾಂಬ ಗ್ರಾಮದಲ್ಲಿ ಪಶು ಆಸ್ಪತ್ರೆಗಳನ್ನು ಸ್ಥಾಪಿಸುವ ಸಂಬಂಧ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಹಾಗಿದ್ದಲ್ಲಿ, ಎಂದಿನಿಂದ ಪ್ರಾರಂಭಿಸಲಾಗುವುದು/ಮೇಲ್ದರ್ಜೆಗೇರಿಸಲಾಗುವುದು (ವಿವರ ನೀಡುವುದು)?